೯) ಲಾಭದಾಯಕವಲ್ಲದ ನಗರ ಸಾರಿಗೆ ಹೊಣೆಗಾರಿಕೆಯನ್ನು ಹೊತ್ತಿರುವುದು.

೧೦) ಲಾಭದಾಯಕವಾಗಿರಲಿ ಅಥವಾ ಇಲ್ಲದಿರಲಿ ಗಣನೆಗೆ ತೆಗೆದುಕೊಳ್ಳದೆ ಗ್ರಾಮಾಂತರ ಪ್ರದೇಶಗಳಿಗೆ ಸಾರಿಗೆ ಸೌಲಭ್ಯವನ್ನು ಒದಗಿಸಿರುವುದು.

೧೧) ಇಂಧನ, ಟೈರುಗಳು, ಬಿಡಿ ಭಾಗಗಳು ಮುಂತಾದ ಸಾಮಾಗ್ರಿಗಳ ಬೆಲೆಗಳಲ್ಲಿ ಹೆಚ್ಚಳ ಉಂಟಾದಾಗಲೆಲ್ಲ ಪ್ರಯಾಣದ ದರವನ್ನು ಸಂಸ್ಥೆಯು ಪರಿಷ್ಕರಿಸಲು ಸಾಧ್ಯವಾಗದೆ ಇರುವುದು.

೧೯೮೯-೯೦ನೇ ಆರ್ಥಿಕ ಸಾಲಿನಲ್ಲಿ ೧೫-೩-೧೯೯೦ರ ಅಂತ್ಯದ ವೇಳೆಗೆ ರಸ್ತೆ ಸಾರಿಗೆ ಸಂಸ್ಥೆಯು ರಾಜ್ಯ ಸರ್ಕಾರಕ್ಕೆ ವಾಹನ ತೆರಿಗೆ ಬಾಬ್ತು ೫೨.೪೧ ಕೋಟಿ ರೂ.ಗಳನ್ನು ಸಂದಾಯ ಮಾಡಿರುತ್ತದೆ.

ಕ.ರಾ.ರ.ಸಾ. ಸಂಸ್ಥೆಯಲ್ಲಿ ಆಗುವ ನಷ್ಟವನ್ನು ತಡೆಗಟ್ಟುವುದು.

೨೩೮. ಶ್ರೀ ಪಿ. ಜಿ. ಆರ್. ಸಿಂಧ್ಯ (ಕನಕಪುರ).—ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಮತ್ತು ಸಾರಿಗೆ ರಾಜ್ಯ ಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ೧೯೮೯-೯೦ನೇ ಫೆಬ್ರವರಿ ಅಂತ್ಯದವರೆಗೆ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಗೆ ಆಗಿರತಕ್ಕ ಅಂದಾಜಿನ ನಷ್ಟವೆಷ್ಟು ?

ಆ) ೧೯೮೯-೯೦ನೇ ಸಾಲಿನಲ್ಲಿ ಆಗಿರತಕ್ಕ ನಷ್ಟವೆಷ್ಟು ?

ಇ) ಈ ನಷ್ಟಗಳನ್ನು ತಡೆಗಟ್ಟಲು ಸರ್ಕಾರ ಕೈಗೊಂಡ ಕ್ರಮಗಳೇನು ?

ಶ್ರೀ ಕೆ. ಜೆ. ಜಾರ್ಜ್ (ಆಹಾರ ಮತ್ತು ನಾಗರೀಕ ಸರಬರಾಜು ಮತ್ತು ಸಾರಿಗೆ ರಾಜ್ಯ ಸಚಿವರು).—

ಅ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ತಾತ್ಕಾಲಿಕವಾಗಿ ೧೯೮೯-೯೦ನೇ ಸಾಲಿಗೆ ರೂ. ೩೮೦೪.೩೬ ಲಕ್ಷಗಳ ನಷ್ಟವನ್ನು ಅನುಭವಿಸಿದೆ. (ಫೆಬ್ರವರಿ ೧೯೯೦ರ ವರೆಗೆ)

ಆ) ೧೯೮೯-೯೦ನೇ ಸಾಲಿನಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ರೂ. ೫೪೦೦.೦೫ ಲಕ್ಷಗಳ ನಷ್ಟವನ್ನು ಅನುಭವಿಸಿದೆ.

ಇ) ೧) ವಿತವ್ಯಯ ಆದೇಶವನ್ನು ಕಾರ್ಯಗತ ಗೊಳಿಸಲಾಗಿದೆ.

೨) ಕಾರ್ಯಾಚರಣೆಯಲ್ಲಿಯ ದಕ್ಷತೆಯನ್ನು ಕಡಿಮೆಯಾಗದಂತೆ ಓವರ್‌ಟೈಮ್ ಭತ್ಯವನ್ನು ಕಡಿತಗೊಳಿಸಲಾಗಿದೆ.

೩) ಸುಧಾರಿತ ಕ್ರಮಗಳ ಮೂಲಕ ವಾಹನ ಸಂಚಾರ ಮಾರ್ಗಗಳಲ್ಲಿ ತನಿಖೆ ನಡೆಸಿ ತನ್ಮೂಲಕ ಸಂಸ್ಥೆಯ ಆದಾಯವನ್ನು ಹೆಚ್ಚಿಸುವುದು.

೪) ವಾಹನ ಓಳಕೆಯನ್ನು ಹೆಚ್ಚುಮಾಡುವುದರ ಮೂಲಕ ಪ್ರತಿ ಕಿ.ಮೀ.ಗೆ ತಗಲುತ್ತಿರುವ ಹಾಲಿ ವೆಚ್ಚವನ್ನು ನಿಯಂತ್ರಣಗೊಳಿಸುವುದು.

೫) ಇಂಧನ ಬಳಕೆಯನ್ನು ನಿಗದಿಪಡಿಸುವುದರ ಮೂಲಕ ವೆಚ್ಚವನ್ನು ಕಡಿಮೆ ಮಾಡುವುದು.

೬) ಸರಿಯಾದ ನಿಯಮಿತ ಪ್ರಮಾಣದಲ್ಲಿ ಹೊಸ ಹಾಗೂ ದುರಸ್ತಿ ಮಾಡಿದ ಟೈರುಗಳನ್ನು ವಾಹನಗಳಿಗೆ ಬಳಸುವುದರ ಮೂಲಕವು ಸುಧಾರಿತ ಕ್ರಮವಾದ ಶೀತಲ ಟೈರ್ ರಿಟ್ರೇಡಿಂಗ್ ಮಾಡುವುದರ ಮೂಲಕವೂ ಟೈರುಗಳ ಮೇಲಿನ ಖರ್ಚನ್ನು ಮಿತ ಗೊಳಿಸುವುದು.

೭) ಆಡಳಿತವನ್ನು ಬಿಗಿಗೊಳಿಸಲು ಸೂಕ್ತಕ್ರಮಗಳನ್ನು ಕೈಗೊಳ್ಳಲಾಗಿದೆ.

ಶ್ರೀ ಜಿ. ರಾಜೂಗೌಡ.—೧೯೮೯-೯೦ನೇ ಆರ್ಥಿಕ ಸಾಲಿನಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಅನುಭವಿಸಿತಕ್ಕ ನಷ್ಟ ಎಷ್ಟು ? ಪ್ರತಿ ಕಿಲೋಮೀಟರ್‌ಗೆ ಎಷ್ಟು ತೆರಿಗೆ ಭಾರ ಹೊರುತ್ತೀರಿ ? ವಿದ್ಯಾರ್ಥಿಗಳಿಗೆ ರಿಯಾಯಿತಿ ಕೊಡತಕ್ಕ ಪಾಸು, ಈ ರೀತಿ ಸಾಮಾಜಿಕ ರಿಯಾಯಿತಿಗಳಿಗೆ ಎಷ್ಟು ಖರ್ಚು ಮಾಡುತ್ತೀರಿ ? ಪ್ರತಿ ಕಿಲೋಮೀಟರ್‌ಗೆ ರಸ್ತೆ ಸಾರಿಗೆ ನಿಗಮ ಎಷ್ಟು ತೆರಿಗೆ ಭಾರ ಹೊರುತ್ತದೆ. ಪಕ್ಕದ ರಾಜ್ಯಗಳಾದ ಮದ್ರಾಸ್, ಮಹಾರಾಷ್ಟ್ರ ಬೇರೆ ರಾಜ್ಯಗಳಿಗೆ ಹೋಲಿಸಿದಾಗ ಇದು ಕಡಿಮೆಯಾಗುತ್ತದೆಯೇ ಅಥವಾ ಜಾಸ್ತಿಯಾಗುತ್ತದೆಯೇ? ವಿದ್ಯಾರ್ಥಿಗಳಿಗೆ, ವಯೋವೃದ್ಧರಿಗೆ ಅಂಧರಿಗೆ ಕೊಡತಕ್ಕ ರಿಯಾಯಿತಿಯಲ್ಲಿ ಎಷ್ಟು ವೆಚ್ಚ ಮಾಡುತ್ತೀರಿ ಎಂದು ತಿಳಿಸುತ್ತೀರಾ?

ಶ್ರೀ ಕೆ. ಜೆ. ಜಾರ್ಜ್.—ಕೆಎಸ್ಆರ್‌ಟಿಸಿಯಲ್ಲಿ ನಡೆದಂತಹ ಟರ್ನ್ ಓವರ್ ಮೇಲೆ ಒಟ್ಟು ಮೊತ್ತ ಎಷ್ಟಾಗಿದೆ ಅದರ ಮೇಲೆ ಶೇಕಡ ೧೭ ಪರ್ಸೆಂಟ್ ತೆರಿಗೆಯನ್ನು ಕೊಡುತ್ತಿದ್ದೇವೆ. ಬೇರೆ ರಾಜ್ಯಗಳಿಗೆ ಇದನ್ನು ಹೋಲಿಸಿ ನೋಡಿದರೆ ತುಂಬಾ ಹೆಚ್ಚಾಗಿದೆ. ಅದು ಮಾತ್ರವಲ್ಲ ನಮ್ಮ ರಾಜ್ಯದಲ್ಲಿ ಖಾಸಗಿಯವರು ಮತ್ತು ಕೆಎಸ್ಆರ್‌ಟಿಸಿಯವರು ಕೊಡುವ ತೆರಿಗೆಯನ್ನು ನೋಡಿದರೆ ತುಂಬಾ ಹೆಚ್ಚಾಗಿ ಇದೆ. ಈ ವಿಚಾರವನ್ನು ಪರಿಶೀಲನೆ ಮಾಡುತ್ತಿದ್ದೇವೆ. ೮೯-೯೦ರ ಫೆಬ್ರುವರಿಯ ತನಕ ಸಾರಿಗೆ ನಷ್ಟ ೩೮ ಕೋಟಿ ೪೮ ಲಕ್ಷ ರೂಪಾಯಿಯಾಗಿದೆ.

ಶ್ರೀ ಜಿ. ರಾಜೂಗೌಡ —ದಿನಾಂಕ ೧೫-೩-೯೦ರ ಅಂತ್ಯದ ವೇಳೆಗೆ ರಸ್ತೆ ಸಾರಿಗೆ ಸಂಸ್ಥೆಯು ರಾಜ್ಯ ಸರಕಾರಕ್ಕೆ ವಾಹನ ತೆರಿಗೆ ಬಾಬತ್ತು ೫೨-೪೧ ಕೋಟಿ ರೂಪಾಯಿಗಳನ್ನು ಸಂದಾಯ ಮಾಡಿದೆ ಎಂದು ಹೇಳಿದ್ದೀರಿ. ನಾನು ಕೇಳಿದ್ದುದು ತೆರಿಗೆ ರೂಪದಲ್ಲಿ ಕೊಟ್ಟಿರುವ ಹಣವನ್ನಲ್ಲ ಒಟ್ಟು ನಷ್ಟ ಎಷ್ಟಾಯಿತು ಬೇರೆ ರೂಪದಲ್ಲಿ ಎಷ್ಟು ನಷ್ಟವಾಗಿದೆ ಎಂದು ಸಾರಿಗೆ ಸಂಸ್ಥೆಯನ್ನು ವಿಭಜಿಸತಕ್ಕಂಥಾದ್ದು ನಿಜವೇ ಅದರ ಬಗ್ಗೆ ಯೋಚನೆಯನ್ನೇನಾದರೂ ಮಾಡಿದ್ದೀರಾ ?

ಶ್ರೀ ಕೆ.ಜೆ. ಜಾರ್ಜ್,—ಈಗಾಗಲೇ ೫೨.೪೧ ಕೋಟಿಯನ್ನು ಕೊಟ್ಟಿದ್ದೇವೆ ಅದು ಕೊಟ್ಟು ಫೆಬ್ರುವರಿ ತನಕ ೩೮ ಕೋಟಿ ರೂಪಾಯಿ ಸಾರಿಗೆ ಸಂಸ್ಥೆಗೆ ನಷ್ಟವಾಗಿದೆ. ವಿದ್ಯಾರ್ಥಿಗಳ ಬಸ್ ಪಾಸ್, ಮತ್ತು ಇನ್ನಿತರ ಬಸ್ ಪಾಸ್‌ಗಳನ್ನು ಕೊಡುವುದಕ್ಕೆ ೨೬ ಕೋಟಿ ರೂಪಾಯಿ ನಷ್ಟವಾಗುತ್ತಿದೆ.

ಶ್ರೀ ಪಿ.ಜಿ ಆರ್. ಸಿಂಧ್ಯ.—ಸಾರಿಗೆ ಸಂಸ್ಥೆಯ ನಷ್ಟದ ಬಗ್ಗೆ ವಿವರಕ್ಕೆ ಹೋಗುವುದಿಲ್ಲ. ನಷ್ಟಗಳನ್ನು ತಡೆಗಟ್ಟಲಂ ಮಿತವ್ಯಯದ ಕ್ರಮಗಳನ್ನು ತೆಗೆದುಕೊಂಡಿದ್ದಾರೆಂದು ಹೇಳಿದ್ದಾರೆ ಮಿತವ್ಯಯದ ಹೆಸರಿನಲ್ಲಿ ಎ.ಬಿ ಸಿ. ಷೆಡ್ಯೂಲ್ ರೂಟ್ ಎಂದು ಏನು ಮಾಡಿದ್ದಾರೆ. ಆದರಲ್ಲಿ ಬಹುತೇಕ ರೂಟ್‌ಗಳನ್ನು ಅಂದರೆ ಶುಪಾರು ೮೯-೯೦ ಅನ್ನು ಕ್ಯಾನ್ಸಲ್ ಮಾಡಿದ್ದೀರೆಂದು ತಿಳಿದು ಬಂದಿದೆ. ಜನರು ನನ್ನ ಹತ್ತಿರ ಬಂದು ಹೇಳುತ್ತಿದ್ದಾರೆ. ಈ ರೀತಿ ಮಾಡಿರುವುದು ನಿಜವೇ ? ಇದನ್ನು ಕ್ಯಾನ್ಸಲ್ ಮಾಡಬಾರದು. ಇದರ ಬಗ್ಗೆ ಮಂತ್ರಿಗಳು ಖಚಿತವಾದ ಉತ್ತರವನ್ನು ನೀಡಬೇಕು, ಇನ್ನು ಪರ್ಟಿಕ್ಯುಲರ್‌ಲಿ ಸೆಂಟ್ರಲೈಸ್ ಚೆಕಿಂಗ್ ಎಂದು ಏನು ಮೊದಲು ಇತ್ತು ಅಂದರೆ ಪೋಲೀಸ್ ಇಲಾಖೆ, ಮೋಟಾರ್ ವೆಹಿಕಲ್ಸ್ ಇಲಾಖೆ, ಕೆಎಸ್ಆರ್‌ಟಿಸಿ ಇಲಾಖೆಯವರು ಸೇರಿ ಕೋಆರ್ಡಿನೇಟಿಂಗ್ ಆಗಿ ಚೆಕಿಂಗ್ ಮಾಡುತ್ತಿದ್ದರು. ಇತ್ತೀಚಿನ ದಿನಗಳಲ್ಲಿ ಅಂದರೆ ಮಾನ್ಯ ರಾಜ್ಯಪಾಲರ ಆಡಳಿತಾವಧಿಯಲ್ಲಿ ಇದು ಶೀಘ್ರವಾಗಿ ಸಡಿಲವಾಗಿದೆ ಎಂಬ ವಿಚಾರ ನಿಜವೇ ?

ಶ್ರೀ ಕೆ.ಜೆ. ಜಾರ್ಜ್.—ಈ ರೀತಿ ಷೆಡ್ಯೂಲ್‌ಗಳನ್ನು ಕ್ಯಾನ್ಸಲ್ ಮಾಡುವ ಕ್ರಮವನ್ನು ನಾವು ತೆಗೆದುಕೊಳ್ಳಲಿಲ್ಲ. ಆದರೆ ಕಾರಣಾಂತರಗಳಿಂದ ಕೆಲವೊಂದು ಕಡೆ ಸಿಬ್ಬಂದಿ ವರ್ಗದವರ ಗೈರು ಹಾಜರಿಯಿಂದಾಗಿ ಕೆಲವು ಷೆಡ್ಯೂಲ್‌ಗಳಂ ಕ್ಯಾನ್ಸಲ್ ಆಗುತ್ತಿದೆ, ಅದು ಆಗಬಾರದೆಂಬುದಾಗಿ ಆದೇಶವನ್ನು ಕೊಟ್ಟಿದ್ದೇನೆ. ಆದಷ್ಟು ಬೇಗ ತೀವ್ರವಾದಂತಹ ಕ್ರಮವನ್ನು ತೆಗೆದುಕೊಳ್ಳುತ್ತೇನೆ. ಮಾನ್ಯ ಸದಸ್ಯರು ಹೇಳಿದಂತಹ ಸಲಹೆಯನ್ನು ಕೂಡ ಗಮನದಲ್ಲಿಟ್ಟುಕೊಂಡು ಸೆಂಟ್ರಲೈಸ್ ಚೆಕಿಂಗ್ ಅನ್ನು ಬಿರುಸಾಗಿ ಮಾಡುವುದಕ್ಕೆ ಆದೇಶ ಕೊಟ್ಟಿದ್ದೇನೆ. ನಿಮ್ಮ ಸಲಹೆಯನ್ನು ಗಮನದಲ್ಲಿಟ್ಟುಕೊಂಡು ಮೋಟಾರ್ ವೆಹಿಕಲ್ ಇಲಾಖೆ, ಕೆಎಸ್ಆರ್‌ಟಿಸಿ, ಪೋಲೀಸ್ ಇಲಾಖೆ ಈ ಮೂರೂ ಸೇರಿ ಕೋ ಆರ್ಡಿನೇಟೆಡ್ ಚೆಕಿಂಗ್ ಮಾಡುವ ಸಲಹೆಯನ್ನು ಪರಿಶೀಲನೆ ಮಾಡುತ್ತೇನೆ.

ಶ್ರೀ ಪಿ.ಜಿ ಆರ್. ಸಿಂಧ್ಯ.—ಕಳೆದ ಹತ್ತು ತಿಂಗಳಲ್ಲಿ ಸಿ ಅಂಡ್ ಬಿ ಷೆಡ್ಯೂಲ್ ಅನ್ನು ಏನಾದರೂ ಕ್ಯಾನ್ಸಲ್ ಮಾಡಿದ್ದರೆ ಅದನ್ನು ಮತ್ತೆ ಪ್ರಾರಂಭ ಮಾಡುವುದಕ್ಕೆ ಸೂಚನೆ ಕೊಡುತ್ತೀರಾ ?

೧೦-೮೦ ಎ. ಎಂ.

ಶ್ರೀ ಕೆ. ಜೆ. ಜಾರ್ಜ್.—ಈಗಾಗಲೇ ಹೇಳಿದ್ದೇನೆ. ನಾವಾಗಿಯೇ ಇದನ್ನು ಕ್ಯಾನ್ಸಲ್ ಮಾಡಿಲ್ಲ. ಒಂದು ವೇಳೆ ಏನಾದರೂ ಕಾರಣದಿಂದ ಇದು ಕ್ಯಾನ್ಸಲ್ ಆಗಿದ್ದರೆ ಮತ್ತೆ ಇದನ್ನು ವ್ಯವಸ್ಥೆಗೊಳಿಸುವುದಕ್ಕೆ ಕ್ರಮ ತೆಗದುಕೊಳ್ಳುತ್ತೇನೆ.

ಶ್ರೀ ಕೆ. ಹೆಚ್. ಹನುಮೇಗೌಡ.—ಕೆ.ಎಸ್.ಆರ್.ಟಿ.ಸಿ.ಗೆ ಬಹಳ ಲಾಭಾಂಶ ಬರುತ್ತಿರುವುದಕ್ಕೆ ಇಲ್ಲಿ ಡೂಪ್ಲಿಕೇಟ್ ಟಿಕೆಟ್‌ಗಳನ್ನು ಪ್ರಿಂಟ್ ಮಾಡಿ ಉಪಯೋಗಿಸಿಕೊಳ್ಳುತ್ತಿದ್ದಾರೆ ಎಂದು ಜನರು ಮಾತನಾಡಿಕೊಳ್ಳುತ್ತಿರುತ್ತಾರೆ. ಇದು ನಿಜವೆ ? ಆರೀತಿ ಡೂಪ್ಲಿಕೇಟ್ ಟಿಕೆಟ್ ಪ್ರಿಂಟ್ ಆಗುತ್ತಿರುವುದು ನಿಜವಾಗಿದ್ದರೆ ಇದರ ಬಗ್ಗೆ ಕೂಲಂಕುಷವಾದ ತನಿಖೆಯನ್ನು ಮಾಡಿಸಲು ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಕೆ.ಜೆ. ಜಾರ್ಜ್.—ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಈಗತಾನೆ ಈ ವಿಚಾರವನ್ನು ನನ ಗವಂನಕ್ಕೆ ತಂದಿದ್ದಾರೆ. ಈ ಕೂಡಲೇ ಇದರ ಬಗ್ಗೆ ಕೂಲಂಕುಷ ತನಿಖೆ ಮಾಡುವುದಕ್ಕೆ ಆದೇಶ ಕೊಡುತ್ತೇನೆ.

ಕ.ರಾ.ರ.ಸಾ. ಸಂಸ್ಥೆಯು ಅನುಭವಿಸುತ್ತಿರುವ ನಷ್ಟ

೨೦೪. ಶ್ರೀ ಎಲ್. ಆರ್. ಶಿವರಾಮೆಗೌಡ (ನಾಗಮಂಗಲ).—ಮಾನ್ಯ ಆಹಾರ, ನಾಗರೀಕ ಸರಬರಾಜು ಮತ್ತು ಸಾರಿಗೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ೧೯೭೭ರ ಮಾರ್ಚ್ ೧ ರಿಂದ ೧೯೮೪ರ ಜೂನ್ ೩೦ರ ವರೆಗೆ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ಅನುಭವಿಸಿದ ನಷ್ಟ ಎಷ್ಟು ? (ವರ್ಷವಾರು ವಿವರಕೊಡುವುದು).

ಆ) ಮೇಲ್ಕುಂಡ ಅವಧಿಯಲ್ಲಿ ಕೆ.ಎಸ್.ಆರ್.ಟಿ.ಸಿ.ಯು ಎಷ್ಟು ಸಾರಿ ಪ್ರಯಾಣ ದರವನ್ನು ಹೆಚ್ಚಿಸಿದೆ ? (ಶೇಕಡಾವಾರು ವಿವರಗಳನ್ನು ಕೊಡುವುದು)

ಇ) ಬೆಂಗಳೂರು ನಗರ ಸಾರಿಗೆ ಸಂಸ್ಥೆಯು ಅನುಭವಿಸುತ್ತಿರುವ ನಷ್ಟದ ಮೊತ್ತವೇನು ?

ಶ್ರೀ ಕೆ. ಜೆ. ಜಾರ್ಜ್ (ಆಹಾರ, ನಾಗರೀಕ ಸರಬರಾಜು ಮತ್ತು ಸಾರಿಗೆ ರಾಜ್ಯ ಸಚಿವರು).—

ಅ) ಏಪ್ರಿಲ್ ೧ ರಿಂದ ಮಾರ್ಚ್ ೩೧ಕ್ಕೆ ಅಂತ್ಯವಾಗುವ ೧೯೮೨-೮೮ ಮತ್ತು ೧೯೮೮-೮೯ ಆರ್ಥಿಕ ಸಾಲುಗಳಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ಕ್ರಮವಾಗಿ ರೂ. ೪೯೯.೫೯ ಲಕ್ಷ ಮತ್ತು ೫೪೦೦.೦೫ ಲಕ್ಷ ರೂಪಾಯಿಗಳ ನಷ್ಟವನ್ನು ಅನುಭವಿಸಿದೆ.

ಆ) ಈ ಅವಧಿಯಲ್ಲಿ ಪ್ರಯಾಣ ದರವನ್ನು ಹೆಚ್ಚಿಸಿರುವುದಿಲ್ಲ.

ಇ) ಬೆಂಗಳೂರು ನಗರ ಸಾರಿಗೆ ವಿಭಾಗವು ೧೯೮೮-೮೯ನೇ ಆರ್ಥಿಕ ವರ್ಷದಲ್ಲಿ ೧೮೬೬-೫೬ ಲಕ್ಷ ರೂ. ಗಳ ನಷ್ಟವನ್ನು ಅನುಭವಿಸಿದೆ.

ಶ್ರೀ ಎಲ್.ಆರ್. ಶಿವರಾಮೇಗೌಡ.—ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ತಮ್ಮ ಉತ್ತರದಲ್ಲಿ ಸಾರಿಗೆ ಸಂಸ್ಥೆಯಲ್ಲಿ ೫ ಕೋಟಿ ರೂಪಾಯಿ ನಷ್ಟವಾಗಿದೆ ಎಂದು ಹೇಳಿದ್ದಾರೆ. ಈ ನಷ್ಟದ ಪೈಕಿ ಕೇವಲ ಬೆಂಗಳೂರು ನಗರ ಸಾರಿಗೆ ವಿಭಾಗದಲ್ಲೇ ಸುಮಾರು ೨ ಲಕ್ಷ ರೂಪಾಯಿ ನಷ್ಟವಾಗಿದೆ ಎಂದು ತಿಳಿಸಿದ್ದಾರೆ. ಇನ್ನು ಇಡೀ ರಾಜ್ಯದಲ್ಲಿ ಸುಮಾರು ಮೂರುವರೆ ಲಕ್ಷ ರೂಪಾಯಿಗಳ ನಷ್ಟವಾಗಿದೆ ಎಂದು ಅವರೇ ಒಪ್ಪಿಕೊಂಡಿದ್ದಾರೆ. ಅಂದರೆ ಕೇವಲ ೪೦ ಲಕ್ಷ ಜನಸಂಖ್ಯೆ ಇರತಕ್ಕ ಬೆಂಗಳೂರು ಒಂದರಲ್ಲೇ ಸುಮಾರು ೮೦ ಪರ್ಸೆಂಟ್ ನಷ್ಟವುಂಟಾಗುತ್ತಿದೆ ಎಂದು ಅರ್ಥವಾಗುತ್ತಿದೆ. ಆದ್ದರಿಂದ ಈರೀತಿಯ ನಷ್ಟವನ್ನು ತಪ್ಪಿಸಲು ಬಿ.ಟಿ.ಎಸ್. ಮತ್ತು ಕೆ.ಎಸ್.ಆರ್.ಟಿ.ಸಿ.ಯನ್ನು ಬೇರೆ ಬೇರೆ ಮಾಡಿ ನಮ್ಮ ಹಳ್ಳಿಗಳ ಕಡೆಗೆ ಬಸ್ ಸೌಲಭ್ಯವನ್ನು ಕಲ್ಪಿಸಿಕೊಡುತ್ತೀರಾ ?

ಶ್ರೀ ಕೆ. ಜೆ. ಜಾರ್ಜ್.—ಈರೀತಿಯ ನಷ್ಟ ಕೇವಲ ಬಿ.ಟಿ.ಎಸ್. ಬಸ್‌ನಲ್ಲಿ ಮಾತ್ರವಲ್ಲ. ಇಡೀ ದೇಶದಲ್ಲಿ ಅಂದರೆ ಬೊಂಬಾಯಿ, ದೆಹಲಿ, ತಮಿಳ್ನಾಡಂ ಹೀಗೆ ಎಲ್ಲಾ ಪ್ರಮುಖ ನಗರಗಳ ಸಾರಿಗೆ ಸಂಸ್ಥೆಗಳೂ ಕೂಡ ನಷ್ಟದಲ್ಲಿಯೇ ನಡೆಯಂತ್ತಿವೆ. ಅಂತರಾಷ್ಟ್ರೀಯ ಮಟ್ಟದಲ್ಲಿ ಕೆಗೆದುಕೊಂಡರೂ ಕೂಡ ಪಟ್ಟಣಗಳಲ್ಲಿರುವ ಸಾರಿಗೆ ಸಂಸ್ಥೆಗಳು ನಷ್ಟವನ್ನು ಅನುಭವಿಸುತ್ತಿವೆ. ಈ ಬಿ.ಟಿ.ಎಸ್. ಬಸ್ಸುಗಳು ಇರುವುದು ಕೇವಲ ಬೆಂಗಳೂರಿನ ೪೦ ಲಕ್ಷ ಜನರಿಗೆ ಮಾತ್ರವಲ್ಲ. ಈ ಬೆಂಗಳೂರು ಕರ್ನಾಟಕದ ರಾಜಧಾನಿಯಾಗಿರುವುದರಿಂದ ಮತ್ತು ಸುಂದರವಾದ ನಗರವಾಗಿರುವುದರಿಂದ ಪ್ರತಿದಿನ ಗ್ರಾಮಾಂತರ ಪ್ರದೇಶಗಳಿಂದ ಹತ್ತಾರು ಸಾವಿರ ಜನ ಬಂದು ಹೋಗುತ್ತಾರೆ ಮತ್ತು ಹತ್ತಾರು ಸಾವಿರ ಜನ ಪ್ರವಾಸಿಗರೂ ಕೂಡ ಬಂದು ಹೋಗುತ್ತಾರೆ. ಗ್ರಾಮಾಂತರ ಪ್ರದೇಶಗಳಲ್ಲಿರುವಂತೆ ಬೆಂಗಳೂರಿನ ನಗರದಲ್ಲೂಕೂಡ ಬಡವರು ಮತ್ತು ಮಧ್ಯಮವರ್ಗದ ಜನ ಯಾರಿದ್ದಾರೆ ಅವರು ಈ ನಗರಸಾರಿಗೆಯನ್ನು ಉಪಯೋಗಿಸಿಕೊಳ್ಳುತ್ತಿದ್ದಾರೆ. ಇದರಿಂದಾಗಿ ಇಷ್ಟು ನಷ್ಟವಾಗುತ್ತಿದೆ.

ಶ್ರೀ ಎಲ್. ಆರ್. ಶಿವರಾಮೇಗೌಡ.—ನಗರ ಪ್ರದೇಶದಲ್ಲಿರುವವರಿಗೆ ಬಸ್ಸುಗಳು ಬೇಡವೆಂದು ನಾನು ಹೇಳುತ್ತಿಲ್ಲ. ಗ್ರಾಮಾಂತರ ಪ್ರದೇಶಗಳಲ್ಲಿ ಓಡುತ್ತಿರುವ ಬಸ್ಸುಗಳಲ್ಲಿ ೬೦ ಜನ ಕೂಡುವ ಆಸನ ವ್ಯವಸ್ಥೆ ಇದೆ. ಆದರೆ ಸುಮಾರು ೧೪೦-೧೫೦ ಜನ ಬಸ್ಸಿನ ಒಳಗೆ ಮತ್ತು ಟಾಪ್ ಮೇಲೆ ಕಂಠಿತುಕೊಂಡು ಪ್ರಯಾಣ ಮಾಡುತ್ತಿದ್ದಾರೆ. ನಾನು ತಮ್ಮನ್ನು ಕೇಳಿದಾಗ ಈಗ ಸಾರಿಗೆ ಸಂಸ್ಥೆ ನಷ್ಟದಲ್ಲಿದೆ, ಇನ್ನು ಸ ಲ ದಿವಸ ತಡೆಯಿರಿ, ಆನಂತರ ಗ್ರಾಮಾಂತರ ಪ್ರದೇಶಕ್ಕೆ ಹೆಚ್ಚು ಹೆಚ್ಚು